ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 48/2018

(ಫ್ರಾಸಾ-2 ಚಾಸಾ-2)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 12.03.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಶೋಭಾ |
| ಗಂಡನ ಹೆಸರು | - | ಚಂದ್ರಪ್ಪ |
| ವಯಸ್ಸು | - | 28 ವರ್ಷ, |
| ಉದ್ಯೋಗ | - | ಟೈಲರ್ |
| ವಾಸ | - | ಕುವೆಂಪು ನಗರ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಮೃತ ಮಂಜುನಾಥ ನನ್ನ ಅಣ್ಣ. ಚಾಸಾ-3 ಮತ್ತು 4 ನನ್ನ ತಂದೆ ತಾಯಿ. ಚಾಸಾ-5 ಮೃತನ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಈಗ ಸುಮಾರು 7 ವರ್ಷಗಳ ಹಿಂದೆ ಅಕ್ಟೋಬರ್ 2017ರಲ್ಲಿ ನನ್ನ ಅಣ್ಣ ಮೃತನಾಗಿರುತ್ತಾನೆ. ಅಕ್ಟೋಬರ್ 2017ರಲ್ಲಿ ಒಂದು ದಿನ ಆನೇಕಲ್ ಪೋಲಿಸರು ನನ್ನ ಅಣ್ಣನ ಕೊಲೆಯಾಗಿದೆ ಎಂದು ನಮಗೆ ಮಾಹಿತಿ ನೀಡಿದರು. ನಂತರ ನಾನು ಹಾಗೂ ನನ್ನ ತಂದೆ ಠಾಣೆಗೆ ಹೋದೆವು.

2. ನನ್ನ ಅಣ್ಣ ಮತ್ತು ಅತ್ತಿಗೆ ಚೆನ್ನಾಗಿಯೇ ಇದ್ದು ಆಗಾಗ ನನ್ನ ಅಣ್ಣ ಮದ್ಯಪಾನ ಮಾಡುತ್ತಿದ್ದನು. ನನ್ನ ಅಣ್ಣ ತೀರಿಕೊಂಡ 15 ದಿನಕ್ಕಿಂತ ಮೊದಲು ನನ್ನ ಗಂಡನ ಮನೆಗೆ ಬಂದಿದ್ದು ಅಲ್ಲಿ ನಾನು ಅವನನ್ನು ನೋಡಿರುತ್ತೇನೆ. ನನ್ನ ಅಣ್ಣ ಅಗಾಗ್ಗೆ ನನಗೆ ಕರೆ ಮಾಡುತ್ತಿದ್ದನು. 15 ದಿನಗಳಾದರೂ ಸಹ ಕರೆ ಮಾಡದೇ ಇದ್ದುದ್ದರಿಂದ ಡ್ರೈವಿಂಗ್ ಕೆಲಸಕ್ಕೆ ಹೊರಗೆ ಹೋಗಿರುತ್ತಾನೆ ಎಂದು ನಾನು ತಿಳಿದುಕೊಂಡಿದ್ದೆನು. ನನ್ನ ಅಣ್ಣನ ಸ್ನೇಹಿತರ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಣ್ಣನನ್ನು ಆರೋಪಿತರೇ ಕೊಲೆ

ಮಾಡಿರುತ್ತಾರೆ ಎಂದು ಠಾಣೆಯಲ್ಲಿ ಪೋಲಿಸರು ನನಗೆ ತಿಳಿದಿರುತ್ತಾರೆ. ಆದರೆ ಕಾರಣ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

3. ನನ್ನ ಅಣ್ಣ ಕೊಲೆಯಾಗುವುದಕ್ಕಿಂತ ಮುಂಚೆ ನಾನು ನನ್ನ ಅಣ್ಣನಿಗೆ ಕರೆ ಮಾಡಿದಾಗ ನನ್ನ ಅಣ್ಣನು 1 ನೇ ಆರೋಪಿಯ ಜೊತೆಗೆ ಇದ್ದೇನೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ "ವಾರಕ್ಕೆ ಅಥವಾ 15 ದಿವಸಕ್ಕೆ ------------- ಚಂದ್ರಶೇಖರ್ ಎಂಬುವವರು ಸ್ನೇಹಿತರಾಗಿರುತ್ತಾನೆ" ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರ್ತಿಸಲಾಯಿತು. ನಾನು ನಿಪಿ-3 ರಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ ಆರ್ ಎಂ ವಕೀಲರಿಂದಃ</u>**

4. ನನ್ನ ಅಣ್ಣ ತೀರಿಕೊಂಡು 15 ದಿನಗಳ ನಂತರ ನನಗೆ ಮಾಹಿತಿ ಬಂತು. ಮಾಹಿತಿ ಬಂದಾಗ ನನ್ನ ಅಣ್ಣನ ಅಂತ್ಯಕ್ರಿಯೆ ಆಗಿರಲಿಲ್ಲ. ನನ್ನ ಅತ್ತಿಗೆ ನನ್ನ ಅಣ್ಣನ ಜೊತೆಗೆ ಜಗಳ ಆಡಿ ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ. "ನನ್ನ ಅತ್ತಿಗೆ ಈಗ್ಗೆ ಸುಮಾರು 4 ತಿಂಗಳ ಹಿಂದೆ ಜಗಳ ಮಾಡಿಕೊಂಡು ಹೋದವಳು ವಾಪಸ್ಸು ಬಂದಿರಲಿಲ್ಲ" ಎಂದು ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ನನ್ನ ಅತ್ತಿಗೆಯ ಜೊತೆ ಜಗಳ ಆಡಿದ್ದರಿಂದ ಮನೆಗೆ ಸರಿಯಾಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದೇನೆ ಪೋಲಿಸ್ ಠಾಣೆಗೆ

ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರುನನಗೆ ಏನನ್ನೂ ಹೇಳಿಲ್ಲ ಹಾಗೂ ನಾನು ನೇರವಾಗಿ ಪೋಲಿಸ್ ಠಾಣೆಯಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋದೆನು. ವಿಕ್ಟೋರಿಯಾ ಆಸ್ಪತ್ರೆಯಿಂದ ನಾನು ಮನೆಗೆ ಹೋಗಿದ್ದು ಮತ್ತೆ ಠಾಣೆಗೆ ಹೋಗಿಲ್ಲ. ಮೃತನನ್ನು ಯಾರು ಕೊಲೆ ಮಾಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ** 2 ಮತ್ತು 3 ನೇ ಆರೋಪಿತರ ಪರ ಶ್ರೀ ಹೆಚ್ ಜಿ ಕೆ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು